ಅಲೆಮಾರಿಗಳ ಬೇಡಿಕೆ ಈಡೇರಿಸಲು ಮನವಿ

ಹುಬ್ಬಳ್ಳಿ: ರಾಜ್ಯದ ಹಿಂದುಳಿದ ಅಲೆಮಾರಿ, ಅರೆ ಅಲೆಮಾರಿ ಬುಡಕಟ್ಟು ಸಮುದಾಯಗಳ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಬೆಳಗಾವಿ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯ ಶ್ರೀನಿವಾಸ ಶಾಸ್ತ್ರಿ ಅವರು ಬೆಳಗಾವಿಯಲ್ಲಿ ಬುಧವಾರ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರಿಗೆ ಮನವಿ ಪತ್ರ ಸಲ್ಲಿಸಿದರು. ದೇಶಕ್ಕೆ ಸ್ವಾತಂತ್ರ್ಯ ಬಂದಾಗಿನಿಂದಲೂ ಈ ಸಮುದಾಯಕ್ಕೆ ಅಗತ್ಯ ಸೌಕರ್ಯ ದೊರೆತಿಲ್ಲ. ಸರ್ಕಾರ ಅಲೆಮಾರಿ ನಿಗಮಕ್ಕೆ 200 ಕೋಟಿ ರೂ. ಅನುದಾನ ಮೀಸಲಿಡಬೇಕು. ಇವರ ಸಮಸ್ಯೆಗಳ ಪರಿಹಾರ ಮಾಡುವ ಸಲುವಾಗಿ ಡಾ.ಬಿಕು ಇದಾತೆ ಆಯೋಗದ ವರದಿಯನ್ನು ಜಾರಿಗೆ ತರುವ ನಿಟ್ಟಿನಲ್ಲಿ ಹಾಗೂ ಅಲೆಮಾರಿ ಸಮಗ್ರ ಅಭಿವೃದ್ಧಿಗಾಗಿ ಕ್ರಿಯಾಯೋಜನೆ ರೂಪಿಸಲು ರಾಜ್ಯ ಸರ್ಕಾರಕ್ಕೆ ಸೂಕ್ತ ನಿರ್ದೇಶನ ನೀಡುವಂತೆ ಮನವಿ ಮಾಡಿದ್ದಾರೆ.

ರಾಷ್ಟ್ರಮಟ್ಟದ ಸ್ಪರ್ಧೆಗೆ ಐಶ್ವರ್ಯಾ ಆಯ್ಕೆ

ಕಲಘಟಗಿ: ತಾಲೂಕಿನ ದಾಸ್ತಿಕೊಪ್ಪ ಗ್ರಾಮದ ಸರ್ಕಾರಿ ಆದರ್ಶ ವಿದ್ಯಾಲಯದ ವಿದ್ಯಾರ್ಥಿನಿ ಐಶ್ವರ್ಯಾ ಗಾಂವಕರ್ ದೆಹಲಿಯಲ್ಲಿ ನಡೆಯಲಿರುವ ರಾಷ್ಟ್ರಮಟ್ಟದ ಇನ್‌ಸ್ಪೈರ್ ಅವಾರ್ಡ್ ಪ್ರೋಗ್ರಾಂಗೆ ಆಯ್ಕೆಯಾಗಿದ್ದಾಳೆ. ವಿದ್ಯಾರ್ಥಿನಿಯು ಬಿಸಿಯೂಟ ನೀಡುವ ಸ್ವಯಂ ಚಾಲಿತಯಂತ್ರ ಕುರಿತಾಗಿ ಕಾರ್ಯನಿರ್ವಹಿಸುವ ಮಾದರಿಯನ್ನು ರೂಪಿಸಿದ್ದಾಳೆ.

ಶಿರಸಿ ಹುಡುಗನಿಂದ ದಾಖಲೆ

ಧಾರವಾಡ: ಶಿರಸಿಯ ಬಾಲಕ ಯಶಸ್ ಪ್ರವೀಣ ಕುರುಬರ 16ಕ್ಕಿಂತ ಕಿರಿಯರ ಹ್ಯಾಮರ್ ಎಸೆತದಲ್ಲಿ ದಕ್ಷಿಣ ಭಾರತ ಮಟ್ಟದಲ್ಲಿ ನೂತನ ದಾಖಲೆಯೊಂದಿಗೆ ಚಿನ್ನದ ಪದಕ ಬಾಚಿಕೊಂಡಿದ್ದಾನೆ. ಆಂಧ್ರ ಪ್ರದೇಶದ ಗುಂಟೂರಿನಲ್ಲಿ ಇತ್ತೀಚೆಗೆ ಏರ್ಪಡಿಸಿದ್ದ ಕಿರಿಯರ ದಕ್ಷಿಣ ಭಾರತ ಅಥ್ಲೆಟಿಕ್ ಕೂಟದ 16ಕ್ಕಿಂತ ಕಿರಿಯ ಬಾಲಕರ ಹ್ಯಾಮರ್ ಎಸೆತದ ಸ್ಪರ್ಧೆಯಲ್ಲಿ 61.96 ಮೀಟರ್‌ಗಳ ದೂರ ದಾಖಲಿಸಿ, 2020-21ನೇ ಸಾಲಿನಲ್ಲಿ ಕೇರಳದ ಕಲ್ಲಿಕೋಟೆಯಲ್ಲಿ ಏರ್ಪಡಿಸಿದ್ದ ಕಳೆದ ಕೂಟದಲ್ಲಿ ತಾವೇ ಸ್ಥಾಪಿಸಿದ್ದ 52.19 ಮೀಟರ್‌ಗಳ ದಾಖಲೆಯನ್ನು ಉತ್ತಮಪಡಿಸಿದ್ದಾರೆ. ಯಶಸ್ ಉತ್ತಮ ಕ್ರಿಕೆಟ್ ಪಟುವಾಗಿದ್ದು, ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಧಾರವಾಡ ವಲಯ 2ನೇ ಡಿವಿಜನ್ ಲೀಗ್ ಪಂದ್ಯಗಳಲ್ಲಿ ಧಾರವಾಡದ ಕ್ರಿಕೆಟ್ ಕ್ಲಬ್ ಆಫ್ ಕರ್ನಾಟಕ(ಸಿಸಿಕೆ) ಪರ ಆಡಿದ್ದಾರೆ. ಯಶಸ್ ಸಾಧನೆಗೆ ಸಚಿವ ಶಿವರಾಮ ಹೆಬ್ಬಾರ, ಸಿಸಿಕೆ ಗೌರವ ಕಾರ್ಯದರ್ಶಿ ವಸಂತ ಮುರ್ಡೇಶ್ವರ ಸಂತಸ ವ್ಯಕ್ತಪಡಿಸಿದ್ದಾರೆ.

ಯಶಸ್ ಕುರುಬರ

ರಾಜ್ಯ ಸಂಪುಟ ಸಭೆಯಲ್ಲಿ ನಿರ್ಧಾರ | ಹೆಚ್ಚುವರಿ ರಿಜಿಸ್ಟ್ರಾರ್ ಹುದ್ದೆ ಸೃಜನೆ

ಲೋಕಾಯುಕ್ತ ಬಲವರ್ಧನೆಗೆ ಮೊದಲ ಹೆಜ್ಜೆ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಲೋಕಾಯುಕ್ತ ಬಲವರ್ಧನೆಗೆ ಕ್ರಮ ಕೈಗೊಳ್ಳಲಿದ್ದೇವೆ ಎಂದು ಹೇಳುತ್ತಾ ಬಂದಿದ್ದ ಸರ್ಕಾರ ಇದೀಗ ಆ ದಿಕ್ಕಿನತ್ತ ಸಣ್ಣ ಹೆಜ್ಜೆ ಇಟ್ಟಿದೆ. ಹೈಕೋರ್ಟ್ ಸೂಚನೆಯಂತೆ ಭ್ರಷ್ಟಾಚಾರ ನಿಗ್ರಹದಳ ರದ್ದು ಮಾಡಿದ್ದ ಸರ್ಕಾರ ಅಲ್ಲಿದ್ದ ಪ್ರಕರಣಗಳು ಮತ್ತು ಹುದ್ದೆಯನ್ನು ಲೋಕಾಯುಕ್ತಕ್ಕೆ ವರ್ಗಾಯಿಸಿ ಆದೇಶ ಹೊರಡಿಸಿತ್ತು. ಆ ಪ್ರಕಾರ 145 ಕಾನ್‌ಸ್ಟೆಬಲ್, ಹೆಡ್ ಕಾನ್‌ಸ್ಟೆಬಲ್‌ಗಳು ಈಗಾಗಲೇ ಲೋಕಾಯುಕ್ತಕ್ಕೆ ವರದಿ ಮಾಡಿಕೊಂಡಿದ್ದಾರೆ. ಈ ಬೆಳವಣಿಗೆ ಒಂದು ಭಾಗವಾದರೆ ಲೋಕಾಯುಕ್ತಕ್ಕೆ ಅತ್ಯಗತ್ಯವಾಗಿದ್ದ ಹೆಚ್ಚುವರಿ ರಿಜಿಸ್ಟ್ರಾರ್ ಹುದ್ದೆ ಸೃಜಿಸಲು ನಿರ್ಣಯಿಸಿದೆ.

ಬುಧವಾರ ನಡೆದ ಸಂಪುಟ ಸಭೆಯಲ್ಲಿ ಈ ನಿರ್ಧಾರ ಕೈಗೊಂಡಿದ್ದು, ಲೋಕಾಯುಕ್ತ ನಿರ್ವಹಣೆ ಜವಾಬ್ದಾರಿ ಇರುವ ರಿಜಿಸ್ಟ್ರಾರ್‌ಗೆ ಪ್ರಸ್ತುತ ಪ್ರಕರಣಗಳು ಹೆಚ್ಚಾಗಿ ಹೊರೆಯಾಗುತ್ತಿದ್ದುದರಿಂದ ಇನ್ನೊಂದು ಹುದ್ದೆ ಅಗತ್ಯತೆಯನ್ನು ಪ್ರತಿಪಾದಿಸಲಾಗಿತ್ತು. ಇದರೊಟ್ಟಿಗೆ ಲೋಕಾಯುಕ್ತ, ಉಪ ಲೋಕಾಯುಕ್ತರ ವೇತನ ಹೆಚ್ಚಿಸಲು ನಿರ್ಧರಿಸಲಾಗಿದೆ. ಹೈಕೋರ್ಟ್ ಮುಖ್ಯ ನಾಯಮೂರ್ತಿಗೆ ಸರಿಸಮಾನವಾದ ವೇತನ ಭತ್ಯೆ ನೀಡಲು ತೀರ್ಮಾನಿಸಲಾಗಿದೆ.

ಈ ಎಲ್ಲ ಬದಲಾವಣೆಗಳ ಅನುಷ್ಠಾನಕ್ಕೆ ಕಾನೂನಿನ ತಿದ್ದುಪಡಿಯಾಗಬೇಕಿದ್ದು, ಕರ್ನಾಟಕ ಲೋಕಾಯುಕ್ತ (ತಿದ್ದುಪಡಿ) ವಿಧೇಯಕ, 2022ನ್ನು ಶಾಸನ ಸಭೆಯಲ್ಲಿ ಮಂಡಿಸಲು ಸಂಪುಟ ಸಭೆ ಅನುಮೋದನೆ ನೀಡಿದೆ. ಪ್ರಸ್ತುತ ನಡೆಯುತ್ತಿರುವ ಅಧಿವೇಶನದಲ್ಲಿಯೇ ಈ ತಿದ್ದುಪಡಿ ಮಸೂದೆ ಮಂಡನೆಯಾಗಲಿದೆ.

ಪ್ರಮುಖ ತೀರ್ಮಾನ: ● ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ವಿಧೇಯಕ 2022ಕ್ಕೆ ಅನುಮೋದನೆ.

ಕರ್ನಾಟಕ ಸಾಮಾನ್ಯ ಸೇವಾ (ಮೋಟಾರು ವಾಹನಗಳ ಶಾಖೆ) (ನೇಮಕಾತಿ) (ತಿದ್ದುಪಡಿ) ನಿಯಮಗಳು, 2022ಕ್ಕೆ ಅನುಮೋದನೆ. ●ಕರ್ನಾಟಕ ನಾಗರಿಕ ಸೇವಾ (ನೇರ ನೇಮಕಾತಿ) (ಸಾಮಾನ್ಯ) (ಎರಡನೇ ತಿದ್ದುಪಡಿ) ನಿಯಮಗಳು 2022ಕ್ಕೆ ಅನುಮೋದನೆ. ●ಹಾವೇರಿ ಜಿಲ್ಲೆ ಸವಣೂರು ತಾಲೂಕು ಕೇಂದ್ರದಲ್ಲಿ ಸರ್ಕಾರಿ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯನ್ನು 64 ಕೋಟಿ ರೂ. ವೆಚ್ಚದಲ್ಲಿ ಪ್ರಾರಂಭಿಸಲು ಅನುಮತಿ. ●ಹುಬ್ಬಳ್ಳಿ-ಬಳ್ಳಾರಿ ರೈಲ್ವೆ ಮಾರ್ಗದ ಹೊಸಪೇಟೆ- ಕಾರಿಗನೂರು ರೈಲ್ವೆ ನಿಲ್ದಾಣಗಳ ನಡುವಿನ ಕಿ.ಮೀ. 145/400-500 ನಲ್ಲಿ ಬರುವ ರೈಲ್ವೆ ಲೆವೆಲ್ ಕ್ರಾಸಿಂಗ್ ಗೇಟ್ ಬದಲಿಗೆ ರಸ್ತೆ ಮೇಲು ಸೇತುವೆ ಹಾಗೂ ಕೂಡು ರಸ್ತೆಯ ನಿರ್ಮಾಣಕ್ಕೆ 26.21 ಕೋಟಿ ರೂ.

ಚಾಲಕನ ನಿಯಂತ್ರಣ ತಪ್ಪಿ ಡಿವೈಡರ್‌ಗೆ ಡಿಕ್ಕಿ ಹೊಡೆದ ಕಾರು

ಭೀಕರ ಅಪಘಾತದಲ್ಲಿ 3 ಸಾವು

■ ವಿಜಯವಾಣಿ ಸುದ್ದಿಜಾಲ ಹುಬ್ಬಳ್ಳಿ

ಚಾಲಕನ ನಿಯಂತ್ರಣ ತಪ್ಪಿದ ಕಾರು ಡಿವೈಡರ್‌ಗೆ ಡಿಕ್ಕಿ ಹೊಡೆದು ನಾಲ್ಕೈದು ಬಾರಿ ಪಲ್ಟಿಯಾದ ಭೀಕರ ಅಪಘಾತದಲ್ಲಿ ಮೂವರು ದುರ್ಮರಣಕ್ಕೀಡಾಗಿ, ಮತ್ತೊಬ್ಬ ಗಾಯಗೊಂಡ ಘಟನೆ ಪುಣೆ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ತಾಲೂಕಿನ ವರೂರು ಬಳಿ ಮಂಗಳವಾರ ತಡರಾತ್ರಿ ಸಂಭವಿಸಿದೆ.

ದಾವಣಗೆರೆಯ ಆಜಾದ ನಗರ ನಿವಾಸಿ, ಚಾಲಕ ಶಾರೂಖ್ ಇಸ್ಮಾಯಿಲ್‌ಸಾಬ (27), ಸೈಯದ್ ಸುಹೀಲ್ ಸಯ್ಯದ್ ಉಸ್ಮಾನ್ (26) ಮತ್ತು ಚಿಕ್ಕಮಗಳೂರು ತಾಲೂಕು ಆಲ್ದೂರು ಕೆಳಗೂರು ಕಾಲನಿ ನಿವಾಸಿ ಎಚ್.ಟಿ. ಸುಶೀಲಾ (38) ಮೃತಪಟ್ಟವರು. ದಾವಣಗೆರೆ ಅಹ್ಮದ ನಗರದ ಫಯಾಜ್ ಅಹ್ಮದ ಖಲೀಲಸಾಬ ಗಾಯಗೊಂಡಿದ್ದಾನೆ.

ದಾವಣಗೆರೆಯ ಮಂಡಕ್ಕಿ ವ್ಯಾಪಾರಿಗಳಾದ ಶಾರೂಖ್, ಸೈಯದ್ ಸುಹೀಲ್ ಹಾಗೂ ಫಯಾಜ್ ಹುಬ್ಬಳ್ಳಿಗೆ ಚುರುಮರಿ ಸರಬರಾಜು ಮಾಡುತ್ತಿದ್ದರು. ಬಾಕಿ ವಸೂಲಿಗೆಂದು ಹುಂಡೈ ವೆರ್ನಾ ಕಾರಿನಲ್ಲಿ ಹುಬ್ಬಳ್ಳಿಗೆ ಬರುತ್ತಿದ್ದರು. ಕಾರಿನಲ್ಲಿ ಸುಶೀಲಾ ಎಂಬುವರೂ ಇದ್ದರು. ಶಾರೂಖ್ ವಾಹನ ಚಲಾಯಿಸುತ್ತಿದ್ದ. ವರೂರು ಸಮೀಪದ ಗಣೇಶ ಹೋಟೆಲ್ ಬಳಿ ವೇಗವಾಗಿ ಬರುತ್ತಿದ್ದಾಗ ಚಾಲಕನ ನಿಯಂತ್ರಣ ತಪ್ಪಿದ ಕಾರು ಡಿವೈಡರ್‌ಗೆ ಡಿಕ್ಕಿ ಹೊಡೆದು ನಾಲ್ಕೈದು ಬಾರಿ ಪಲ್ಟಿ ಹೊಡೆದಿದೆ. ಅಪಘಾತದ ರಭಸಕ್ಕೆ ಕಾರು ನಜ್ಜುಗುಜ್ಜಾಗಿದೆ.

ಹುಬ್ಬಳ್ಳಿ ತಾಲೂಕಿನ ವರೂರು ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಮಂಗಳವಾರ ರಾತ್ರಿ ಸಂಭವಿಸಿದ ಭೀಕರ ಅಪಘಾತದಲ್ಲಿ ಕಾರು ನಜ್ಜುಗುಜ್ಜಾಗಿರುವುದು.

ಮಾಹಿತಿ ತಿಳಿಯುತ್ತಿದ್ದಂತೆ ಗ್ರಾಮೀಣ ಠಾಣೆ ಇನ್‌ಸ್ಪೆಕ್ಟರ್ ರಮೇಶ ಗೋಕಾಕ ಹಾಗೂ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಪರಿಶೀಲಿಸಿದರು. ಸೈಯದ್ ಸುಹೀಲ್ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಗಂಭೀರವಾಗಿ ಗಾಯಗೊಂಡಿದ್ದ ಸುಶೀಲಾ ಹಾಗೂ ಶಾರೂಖ್ ಕಿಮ್ಸ್‌ನಲ್ಲಿ ಚಿಕಿತ್ಸೆಗೆ ಸ್ಪಂದಿಸದೇ ನಸುಕಿನ ಜಾವ ಕೊನೆಯುಸಿರೆಳೆದಿದ್ದಾರೆ. ಗಾಯಾಳು ಫಯಾಜ್‌ಗೆ ಚಿಕಿತ್ಸೆ ನೀಡಲಾಗುತ್ತಿದೆ. ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸುಶೀಲಾ ಅವರು ಡ್ರಾಪ್ ಕೊಡುವಂತೆ ಕೇಳಿಕೊಂಡರು. ಹಾಗಾಗಿ, ಅವರನ್ನು ಕಾರಿನಲ್ಲಿ ಕರೆದುಕೊಂಡು ಬಂದಿದ್ದೆವು ಎಂದು ಗಾಯಾಳು ಹೇಳಿರುವುದಾಗಿ ಪೊಲೀಸ್ ಮೂಲಗಳು ತಿಳಿಸಿವೆ.

ಕಾಲುವೆಗೆ ಆಟೋ ಬಿದ್ದು ಮೂವರ ದುರ್ಮರಣ

ಬಳ್ಳಾರಿ: ಕೂಲಿ ಕಾರ್ಮಿಕರನ್ನು ಹೊತ್ತೊಯ್ಯುತ್ತಿದ್ದ ಆಟೋ ಬುಧವಾರ ಕೊಳಗಲ್ಲು ಗ್ರಾಮದ ಬಳಿ ಎಚ್‌ಎಲ್ ಕಾಲುವೆಗೆ ಬಿದ್ದು ಮೂವರು ಮೃತಪಟ್ಟಿದ್ದಾರೆ. ಇನ್ನೂ ಮೂವರು ನಾಪತ್ತೆಯಾಗಿದ್ದು, ಐವರನ್ನು ರಕ್ಷಿಸಲಾಗಿದೆ. ಗ್ರಾಮದ ನಿವಾಸಿಗಳಾದ ನಿಂಗಮ್ಮ(34) ದುರುಗಮ್ಮ(35) ಪುಷ್ಪಾವತಿ(16) ಮೃತರು. ಹುಲಿಗೆಮ್ಮ(27), ಮಲ್ಲಮ್ಮ (36), ನಾಗರತ್ನಾ (26) ನಾಪತ್ತೆಯಾದವರು. ಆಟೋ ಚಾಲಕ ಈಡಿಗರ ಭೀಮ, ದಮ್ಮೂರು ಎರ್ರಿಮ್ಮ, ಹೇಮಾವತಿ, ಶಿಲ್ಪಾ ಮತ್ತು ಮಹೇಶ್ ಪ್ರಾಣಾಪಾಯದಿಂದ ಪಾರಾದವರು. ಆಟೋ ಸ್ಕಿಡ್ ಆಗುತ್ತಿದ್ದಂತೆ ಮಹೇಶ್ ಎಂಬಾತ ಕೆಳಗೆ ಜಿಗಿದು ಜೀವ ಉಳಿಸಿಕೊಂಡಿದ್ದಾರೆ. ಚಾಲಕ ಸೇರಿ ಉಳಿದ 10 ಜನ ಕಾಲುವೆಗೆ ಬಿದ್ದಿದ್ದು, ಎಲ್ಲರೂ ಕೂಗಿಕೊಂಡಿದ್ದಾರೆ. ಪಕ್ಕದ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ಸಣ್ಣ ದೊಡ್ಡಪ್ಪ ಮತ್ತು ಸರಸ್ವತಿ ಸ್ಥಳಕ್ಕೆ ಓಡಿ ಬಂದಿದ್ದಾರೆ. ಸಣ್ಣದೊಡ್ಡಪ್ಪ ಪಂಚೆಯನ್ನು, ಸರಸ್ವತಿ ಸೀರೆಯನ್ನು ಬಳಸಿ ನೀರಿನಲ್ಲಿ ಮುಳುಗುತ್ತಿದ್ದ ನಾಲ್ವರ ರಕ್ಷಣೆ ಮಾಡಿದ್ದಾರೆ. ಚಾಲಕ ಈಜಿ ದಡ ಸೇರಿದ್ದಾನೆ. ರಕ್ಷಿಸಲಾದ ಐವರನ್ನು ವಿಮ್ಸ್ ಆಸ್ಪತ್ರೆಗೆ ರವಾನಿಸಲಾಗಿದ್ದು, ಪುಷ್ಪಾವತಿ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾಳೆ.

ಸ್ಕ್ರೀನ್ ರೆಕಾರ್ಡಿಂಗ್ ಮಾಡಿ ವೈದ್ಯನಿಗೆ ಬೆದರಿಸಿ ಸುಲಿಗೆ

ಹುಬ್ಬಳ್ಳಿ: ನಿಶಾ ಎಂಬ ಮಹಿಳೆ ನಗರದ ವೈದ್ಯರೊಬ್ಬರಿಗೆ ಕರೆ ಮಾಡಿ ಸಲುಗೆ ಬೆಳೆಸಿಕೊಂಡು ವಿಡಿಯೋ ಕರೆ ರೆಕಾರ್ಡಿಂಗ್ ಮಾಡಿಕೊಂಡು, ಅದನ್ನು ಎಲ್ಲರಿಗೂ ಕಳುಹಿಸುವುದಾಗಿ ಬೆದರಿಸಿ 3.61 ಲಕ್ಷ ರೂ. ವರ್ಗಾಯಿಸಿಕೊಂಡು ವಂಚಿಸಿದ್ದಾಳೆ.

ಇಲ್ಲಿನ ವಿದ್ಯಾನಗರ ಪ್ರಭಾತ್ ಕಾಲನಿಯ ವೈದ್ಯರೊಬ್ಬರಿಗೆ ನಿಶಾ ಎಂಬ ಹೆಸರಿನ ಯುವತಿ ಆ.22ರಿಂದ ಸೆ.12ರ ನಡುವೆ ವೈದ್ಯರಿಗೆ ಕರೆ ಮಾಡಿದ್ದಳು. ವಾಟ್ಸ್ ಆ್ಯಪ್ ಸಂದೇಶ ಹಾಗೂ ವಿಡಿಯೋ ಕರೆಗಳ ಮೂಲಕ ಸಂಪರ್ಕಿಸಿದ್ದಳು. ಆ ವೇಳೆ ಅವರೊಂದಿಗೆ ಅತ್ಯಂತ ಆಪ್ತತೆಯಿಂದ ಮಾತನಾಡಿ, ಅದನ್ನು ವಿಡಿಯೊ ಸ್ಕ್ರೀನ್ ರೆಕಾರ್ಡಿಂಗ್ ಮಾಡಿ ಅವರಿಗೆ ಕಳುಹಿಸಿದ್ದಾಳೆ. ಅದನ್ನು ಎಲ್ಲರಿಗೂ ಕಳುಹಿಸುವುದಾಗಿ ಬೆದರಿಸಿ ಹಣ ಸುಲಿಗೆ ಮಾಡಿದ್ದಾಳೆ. ನಂತರ ಸಂಜೀವ ಎಂಬಾತ ಕರೆ ಮಾಡಿ, ತಾನು ಯೂಟ್ಯೂಬ್ ಚಾನೆಲ್ ರಿಪೋರ್ಟರ್ ಎಂದು, ಮತ್ತೊಬ್ಬ ವಿಕ್ರಮ ಎಂಬಾತ ದೆಹಲಿ ಕ್ರೈಂ ಬ್ರ್ಯಾಂಚ್ ಅಧಿಕಾರಿ ಎಂದು ಹೇಳಿ ಮತ್ತಷ್ಟು ಹಣ ವರ್ಗಾಯಿಸಿಕೊಂಡು ವಂಚಿಸಿದ್ದಾರೆ ಎಂದು ಸೈಬರ್ ಕ್ರೈಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಿಟ್ ಕಾಯಿನ್ ಹೆಸರಲ್ಲಿ ವಂಚನೆ

ಹುಬ್ಬಳ್ಳಿ: ಬಿಟ್ ಕಾಯಿನ್ ಮೂಲಕ ಹಣ ದುಪ್ಪಟ್ಟು ಮಾಡಿಕೊಡುತ್ತೇವೆಂದು ನಂಬಿಸಿ ಇಲ್ಲಿನ ನಾಗಶೆಟ್ಟಿಕೊಪ್ಪ ಇಂದಿರಾನಗರದ ನಂದಕುಮಾರ ಎಂಬುವರಿಗೆ ವಂಚಿಸಿರುವ ಕುರಿತು ಸೈಬರ್ ಕ್ರೈಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಂಚಕರು ಟೆಲಿಗ್ರಾಮ್ ಗ್ರೂಪ್‌ಗೆ ನಂದಕುಮಾರ ಅವರನ್ನು ಸೇರಿಸಿಕೊಂಡು ಮನಿ ಡಬ್ಲಿಂಗ್ ಆಸೆ ತೋರಿಸಿದ್ದಾರೆ. ನಂತರ ಪ್ರವೇಶ ಶುಲ್ಕ, ತೆರಿಗೆ, ಸೇವಾ ಶುಲ್ಕ ಮತ್ತಿತರ ನೆಪದಲ್ಲಿ 95.033 ರೂ. ವರ್ಗಾಯಿಸಿಕೊಂಡು ವಂಚಿಸಿದ್ದಾರೆ ಎಂದು ದೂರಿನಲ್ಲಿ ದಾಖಲಾಗಿದೆ.

ಇಬ್ಬರ ಬಂಧನ: ನಗರದ ಕಮರಿಪೇಟೆ ಹಾಗೂ ಗೋಕುಲ ರಸ್ತೆಯ ಮಂಜುನಾಥ ನಗರದಲ್ಲಿ ಮಟ್ಕಾ ಚೀಟಿ ಬರೆದುಕೊಳ್ಳುತ್ತಿದ್ದ ಇಬ್ಬರನ್ನು ಪೊಲೀಸರು ಬಂಧಿಸಿ, ಆರೋಪಿತರಿಂದ 4,520 ರೂ. ನಗದು ವಶಪಡಿಸಿಕೊಂಡಿದ್ದಾರೆ.

ಶಾಲೆಗೆ ನುಗ್ಗಿ ಪುಂಡರ ಹಾವಳಿ

ಹುಬ್ಬಳ್ಳಿ: ಇಲ್ಲಿನ ಹಳೇ ಹುಬ್ಬಳ್ಳಿಯ ವಿವೇಕಾನಂದ ಶಾಲಾ ಆವರಣಕ್ಕೆ ನುಗ್ಗಿದ ಪುಂಡರಿಬ್ಬರು ಶಿಕ್ಷಕರೊಂದಿಗೆ ಜಗಳ ತೆಗೆದು, ಭದ್ರತಾ ಸಿಬ್ಬಂದಿ ಮೇಲೆ ಹಲ್ಲೆ ಮಾಡಿದ ಘಟನೆ ತಡವಾಗಿ ಬೆಳಕಿಗೆ ಬಂದಿದೆ.

» ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡ ಹಳೇ ಹುಬ್ಬಳ್ಳಿ ಪೊಲೀಸರು

ದಿಡ್ಡಿ ಓಣಿ ನಿವಾಸಿ ಅಜಯ ಹಾಗೂ ಕಾರ್ತಿಕ ಎಂಬುವರು ಶಾಲೆಯ ಆವರಣಕ್ಕೆ ನುಗ್ಗಿದ್ದರು. ಶಾಲಾ ಆವರಣದಲ್ಲಿ ದುಶ್ಚಟಗಳನ್ನು ಮಾಡಬೇಡಿ ಎಂದು ಶಿಕ್ಷಕರು ಬುದ್ಧಿ ಹೇಳಿದ್ದರು. ಇಷ್ಟಕ್ಕೆ ಆಕ್ರೋಶಗೊಂಡ ಯುವಕರು ಶಿಕ್ಷಕರ ಮೇಲೆ ಹಲ್ಲೆಗೆ ಮುಂದಾಗಿದ್ದರು. ಬಳಿಕ ಸೆಕ್ಯುರಿಟಿ ಗಾರ್ಡ್ ಮೇಲೆ ಹಲ್ಲೆ ನಡೆಸಿದ್ದಾರೆ. ವಿಷಯ ತಿಳಿದ ಕೂಡಲೇ ಸ್ಥಳಕ್ಕಾಗಮಿಸಿದ ಹಳೇ ಹುಬ್ಬಳ್ಳಿ ಠಾಣೆ ಪೊಲೀಸರು, ಯುವಕರಿಬ್ಬರನ್ನು ವಶಕ್ಕೆ ಪಡೆದು ಠಾಣೆಗೆ ಕರೆದೊಯ್ದರು. ಶಾಲೆಯವರು ದೂರು ನೀಡಲು ಹಿಂದೇಟು ಹಾಕಿದ್ದರಿಂದ ಸುಮೋಟೊ ಪ್ರಕರಣ ದಾಖಲಿಸಿಕೊಂಡು ಆರೋಪಿತರನ್ನು ಬಂಧಿಸಿದ್ದಾರೆ.

ICICI Home Finance | ಕಾರ್ಪೊರೇಟ್ ಕಚೇರಿ: ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್ ಐಸಿಐಸಿಐ ಎಚ್‌ಎಫ್‌ಸಿ ಟವರ್, ಅಂಧೇರಿ-ಕುರ್ಲಾ ರಸ್ತೆ, ಅಂಧೇರಿ(ಪೂರ್ವ), ಮುಂಬೈ -400059, ಭಾರತ

ಶಾಖಾ ಕಚೇರಿ: ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್, 2ನೇ ಮಹಡಿ, ಆರ್.ಡಿ. ಬದ್ದಿ ಮ್ಯಾನ್ಷನ್, ಕೋಟಕ್ ಬ್ಯಾಂಕ್ ಮೇಲೆ, ಧಾರವಾಡ ಹುಬ್ಬಳ್ಳಿ 123, ಡಿ ಕ್ಲಬ್ ರಸ್ತೆ, ಹುಬ್ಬಳ್ಳಿ- 580029.

(ನಿಯಮ 8 (6) ರ ನಿಬಂಧನೆ ನೋಡಿ)

ಸ್ಥಿರ ಆಸ್ತಿಗಳ ಮಾರಾಟಕ್ಕಾಗಿ ನೋಟಿಸ್

2002 ರ ಭದ್ರತಾ ಹಿತಾಸಕ್ತಿಯ (ಜಾರಿ) ನಿಯಮಗಳ 8(6) ನಿಯಮದ ನಿಬಂಧನೆ ಓದಿಕೊಂಡಂತೆ ಆರ್ಥಿಕ ಸ್ವತ್ತುಗಳ ಭದ್ರತೆ ಮತ್ತು ಪುನರ್ನಿರ್ಮಾಣದ ಆಡಿಯಲ್ಲಿ ಸ್ಥಿರ ಆಸ್ತಿಗಳ ಮಾರಾಟಕ್ಕಾಗಿ ಇ-ಹರಾಜು ಮಾರಾಟದ ನೋಟೀಸ್.

ಈ ಮೂಲಕ ಸಾರ್ವಜನಿಕರಿಗೆ ಹಾಗೂ ಪ್ರಮುಖವಾಗಿ ಕೆಳಗೆ ಸೂಚಿಸಿರುವ ಸಾಲಗಾರ(ರು) ಮತ್ತು ಜಾಮೀನುದಾರ(ರು) ರಿಡಿ ಪ್ರಕಟಕೆ ನೀಡುವುದೇನೆಂದರೆ ಈ ಕೆಳಗೆ ಸೂಚಿಸಿರುವ ಸ್ಥಿರ ಸ್ವತ್ತುಗಳನ್ನು ಸೆಕ್ಯೂರ್ಡ್ ಕ್ರೆಡಿಟರ್‌ಗೆ ಅಡಮಾನ/ಹೋಕೆ ಯಾಗಿದ್ದು, ಐ